ಕುಳಿತುಕೊಂಡಿದ್ದೀರೆಂದು ನಾನು ಈ ಮಾತನ್ನು ಹೇಳುತ್ತಿಲ್ಲ. ನಿಮಗೆ ಈಗಾಗಲೇ ನಾನು ಏನು ಆಶ್ವಾಸನೆ ಕೊಟ್ಟಿದ್ದೇನೆಯೋ ಆ ಪ್ರಕಾರ ಸಭೆ ಕರೆಯಲಾಗಿದೆ. ಮತ್ತೆ ಗಿರಿಜನರ ಬಗ್ಗೆ ಮತ್ತು ಮೀನುಗಾರರ ಸಮಸ್ಯೆ ಬಗ್ಗೆ ಮಾತನಾಡಬೇಕೆಂದು ಮಾನ್ಯ ವಿಶ್ವೇಶ್ವರ ಹೆಗಡೆಯವರು ಕೂಡ ಮನವಿ ಮಾಡಿಕೊಂಡಿದ್ದಾರೆ. ಆದ್ದರಿಂದ, ಈ ವಿಷಯವಕ್ಕೆ ಸಂಬಂಧಪಟ್ಟಂಥ ಸಭೆಯನ್ನು ಮಂಗಳವಾರದ ದಿವಸ ಕರೆಯಲಾಗಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಮಾನ್ಯ ಸಿ.ಟಿ.ರವಿಯವರು ವಿಶೇಷವಾಗಿ ಪಾದಯಾತ್ರೆ ಮಾಡಿ ಈ ರಾಜ್ಯದ ಗಮನವನ್ನು ಸೆಳೆದಿದ್ದಾರೆ.

ಶ್ರೀ ಧರ್ಮಸಿಂಗ್:– ಇವತ್ತು ಕಳಸ ಬಂಡೂರಿ ನಾಲೆ ಬಗ್ಗೆ ಸಭೆ ಕರೆಯಲಾಗಿತ್ತು. ಮಾನ್ಯ ಸಿ.ಟಿ.ರವಿರವರು ನೀಡಿರತಕ್ಕಂಥ ಮನವಿ ಬಗ್ಗೆ ಚರ್ಚೆ ಮಾಡಲು 25ನೇ ತಾರೀಖು ಬೆಳಿಗ್ಗೆ 9.30 ಗಂಟೆಗೆ ಕೃಷ್ಣ ಗೃಹ ಕಚೇರಿಯಲ್ಲಿ ಸಭೆ ಕರೆಯಲಾಗಿದೆ. ಸಭೆ ಕರೆಯುವ ಬಗ್ಗೆ ಈಗಾಗಲೇ ಪತ್ರ ಕೂಡ ಬರೆಯಲಾಗಿದೆ. ಇದರ ಬಗ್ಗೆ ಖಂಡಿತ ಚರ್ಚೆ ಮಾಡುತ್ತೇವೆ.

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಶ್ರೀ ಸಿ.ಟಿ.ರವಿ ಮತ್ತು ಶ್ರೀ ಡಿ.ಎನ್.ಜೀವರಾಜ್ ಹಾಗು ಶ್ರೀ ಎಂ.ಪಿ.ಕುಮಾರಸ್ವಾಮಿಯವರು ತಮ್ಮ ಸ್ಥಾನಗಳಿಗೆ ಮರಳಿದರು)

ಉಪಾಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾಗುವ ಉತ್ತರಗಳು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 5432
ಸದಸ್ಯರ ಹೆಸರು : ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು
ಉತ್ತರಿಸುವ ದಿನಾಂಕ : 19.07.2005
ಉತ್ತರಿಸುವ ಸಚಿವರು : ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಆಲಮಟ್ಟಿ ಜಲಾಶಯವು ದಿ.ಲಾಲ್‌ಬಹದ್ದೂರ್ ಶಾಸ್ತ್ರಿಯವರ ಅವಧಿಯಲ್ಲಿ ಪ್ರಾರಂಭವಾಯಿತೇ?	ಹೌದು. ದಿ.ಲಾಲ್ ಬಹದ್ದೂರ್ ಶಾಸ್ತ್ರಿಯವರು ದಿನಾಂಕ: 22.5.1964ರಂದು ಆಲಮಟ್ಟಿ ಅಣೆಕಟ್ಟಿನ ಶಂಕುಸ್ಥಾಪನೆಯನ್ನು ನೆರವೇರಿಸಿರುತ್ತಾರೆ.
ಆ.	ಇಲ್ಲದಿದ್ದಲ್ಲಿ, ಯಾವಾಗ ಪ್ರಾರಂಭವಾಯಿತು.	

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
೩.	ಈ ಜಲಾಶಯಕ್ಕೆ ದಿ.ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೆಸರು ನಾಮಕರಣ ಮಾಡಲು ಸರ್ಕಾರ ನಿರ್ಧರಿಸಿರುವುದಕ್ಕೆ ಕಾರಣಗಳೇನು.	ಆಲಮಟ್ಟಿ ಜಲಾಶಯಕ್ಕೆ ದಿ.ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೆಸರನ್ನು ನಾಮಕರಣ ಮಾಡಲು ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಉಪಾಧ್ಯಕ್ಷರೆ, ಆಲಮಟ್ಟಿ ಜಲಾಶಯಕ್ಕೆ ದಿ.ಲಾಲ್ ಬಹದ್ದೂರ್ ಶಾಸ್ತ್ರಿರವರ ಹೆಸರನ್ನು ನಾಮಕರಣ ಮಾಡಲು ಯಾವಾಗ ಎಂದಿದ್ದಕ್ಕೆ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಆ ಭಾಗದ ಜನರು ಬಾಳಕುಂದ್ರೆಯವರ ಹೆಸರನ್ನು ಇಟ್ಟರೆ ಚೆನ್ನಾಗಿರುತ್ತದೆಂದು ಬಹುತೇಕ ಜನರ ಅಭಿಪ್ರಾಯಗಳು ನಮ್ಮ ಗಮನಕ್ಕೆ ಬಂದಿದೆ. ನಾನು ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೆಸರನ್ನು ಇಡಬಾರದು ಎಂದು ಹೇಳುತ್ತಿಲ್ಲ. ಬಾಳೆಕುಂದ್ರೆಯವರ ಪ್ರತಿಮೆಯನ್ನು ತೆಗೆದುಕೊಂಡು ಹೋಗಿ ಅದನ್ನು ಇಲ್ಲಿಯವರೆವಿಗೂ ಅನಾವರಣ ಮಾಡಲಿಲ್ಲ ಎನ್ನುವಂತಹ ಮಾತನ್ನು ಕೂಡ ಆ ಭಾಗದ ಜನರು ಹೇಳಿದ್ದಾರೆ. ಅವರ ಹೆಸರನ್ನು ಇಡುತ್ತೀರಾ? ಅಥವಾ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಹೆಸರನ್ನು ಇಡುತ್ತೀರಾ? ಇದನ್ನು ಯಾವಾಗ ಇಡುತ್ತೀರಿ, ಇದರ ಬಗ್ಗೆ ಸರ್ಕಾರ ಯಾವ ನಿರ್ಧಾರವನ್ನು ತೆಗೆದುಕೊಳ್ಳುತ್ತದೆ ಎಂಬುದರ ಬಗ್ಗೆ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ದಿವಂಗತ ಲಾಲ್‌ಬಹದ್ದೂರ್ ಶಾಸ್ತ್ರಿಯವರ ಹೆಸರನ್ನು ಇಡಬೇಕೆಂದು ಇದರ ಬಗ್ಗೆ ಪರಿಶೀಲನೆಯಲ್ಲಿದೆ, ಕಾರಣವೆಂದರೆ, 22–05–1964ರಲ್ಲಿ ಈ ಆಲಮಟ್ಟಿ ಅಣೆಕಟ್ಟಿಗೆ ಅವರೆ ಶಂಕುಸ್ಥಾಪನೆ ಮಾಡಿದ್ದರು ಮತ್ತು ಅವರ ವಿಶೇಷವಾದಂತಹ ಸ್ಲೋಗನ್ ಏನು ಇದೆ. 'ಜೈ ಜವಾನ್, ಜೈ ಕಿಸಾನ್' ಎನ್ನುವಂತಹದು ಆ ಒಂದು ದೃಷ್ಟಿಯಿಂದ ಈ ಒಂದು ಆಲಮಟ್ಟಿ ಡ್ಯಾಂಗೆ ಅವರ ಹೆಸರನ್ನು ಇಡಬೇಕೆಂದು ಎನ್ನುವುದು ಪರಿಶೀಲನೆಯಲ್ಲಿದೆ ಇದನ್ನು ಅವರೇ ಶಂಕುಸ್ಥಾಪನೆ ಮಾಡಿದ್ದಾರೆ. ಅವರು ವಿಶೇಷವಾಗಿ ರೈತರ ಬಗ್ಗೆ ಒಂದು ಹೊಸ ಘೋಷಣೆಯನ್ನು ಮಾಡಿ ಸಾಕಷ್ಟು ಪ್ರಾಮಾಣಿಕ ಮತ್ತು ತನ್ನದೇ ಆದಂತಹ ಛಾಪನ್ನು ಇಡೀ ದೇಶದ ಮೇಲೆ ಬಿಟ್ಟು ಹೋಗಿದ್ದಾರೆ. ಅಂತಹ ಮಹನೀಯರ ಹೆಸರನ್ನು ಇಡಬೇಕೆಂದು ಅದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಕನ್ನಡ ಅಂಡ್ ಕಲ್ಚರ್ ಡಿಪಾರ್ಟ್‌ಮೆಂಟ್

ವತಿಯಿಂದ ಇದು ಪ್ರೊಸೆಸ್ ಆಗುತ್ತಿದೆ. ಬಹುಶಃ ಅದನ್ನು ಕ್ಯಾಬಿನೆಟ್‌ಗೆ ಈ ವಿಷಯ ಬಂದ ಮೇಲೆ ಅಲ್ಲಿ ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ಜರುಗಿಸುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಉಪಾಧ್ಯಕ್ಷರೆ, ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೆಸರನ್ನು ಆಲಮಟ್ಟಿಗೆ ಅಣೆಕಟ್ಟಿಗೆ ಇಡುವುದು ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಅದರ ಬಗ್ಗೆ ಘೋಷಣೆ ಮಾಡಿದ್ದಾರೆ. ಅದು ಮುಂದೆ ಕ್ಯಾಬಿನೆಟ್‌ಗೆ ಹೋಗಿ ಅಪ್ರೂವಲ್ ಆಗುವುದು ಅದು ಒಂದು ಪ್ರೊಸೀಜರ್. ಮಾನ್ಯ ಲಾಲ್ ಬಹದ್ದೂರ್ ಶಾಸ್ತ್ರಿಯವರ ಹೆಸರನ್ನು ಇಡುವ ಬಗ್ಗೆ ಯಾರದು ತಕರಾರು ಇಲ್ಲ. ಒಬ್ಬ ಮಹಾನ್ ವ್ಯಕ್ತಿ, ಅಂತಹ ಹೆಸರನ್ನು ಇಡುವುದರಿಂದ ಗೌರವ ಬರುತ್ತದೆ, ಅಲ್ಲಿರುವಂತಹ ಜನರ ಅಭಿಪ್ರಾಯಗಳನ್ನು ತೆಗೆದುಕೊಂಡು, ಅಲ್ಲಿರುವಂತಹವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡುವುದು ಬಹಳ ಒಳ್ಳೆಯದು. ಬಾಳೇಕುಂದ್ರಿಯವರು ಆ ಅಣೆಕಟ್ಟನ್ನು ಕಟ್ಟಲಿಕ್ಕೆ ಅವರ ಕಾಂಟ್ರಿಬ್ಯೂಷನ್ ಬಹಳಷ್ಟು ಇದೆ, ಅವರ ಬುದ್ದಿವಂತಿಕೆ, ಅವರ ಒಂದು ಪ್ರತಿಭೆ ಈ ರೀತಿಯಾದಂತಹ ನೀರಾವರಿ ಯೋಜನೆಗಳಿಗೆ ಸಾಕಷ್ಟು ಅವರು ತಮ್ಮ ಶ್ರಮವನ್ನು ಅಲ್ಲಿ ಪಟ್ಟಿರುವಂತಹದ್ದು ಇವತ್ತು ಎಲ್ಲರಿಗೂ ನೆನಪಿನಲ್ಲಿದೆ. ಅವರ ಒಂದು ಪುತ್ಥಳಿ ಈಗಾಗಲೇ ಸ್ಥಾಪನೆ ಮಾಡಲಾಗಿದೆ. ಅದನ್ನು ಇನ್ನು ಅರಿವೆಯನ್ನು ಹಾಕಿ ಮುಚ್ಚಿಡಲಾಗಿದೆ. ಆ ಬಾಳೆಕುಂದ್ರಿಯವರ ಮೂರ್ತಿಯ ಪ್ರತಿಷ್ಠಾಪನೆ ಯಾವಾಗ ಮಾಡುತ್ತೀರಿ? ಅದು ಎಲ್ಲಾ ತಯಾರಾಗಿದೆ, ಅವರ ಹೆಸರನ್ನು ಇಡಬೇಕೆಂಬ ಭಾವನೆಯೂ ಕೂಡ ಇದೆ. ಹೀಗಾಗಿ ಎಲ್ಲದರ ಬಗ್ಗೆಯೂ ಕೂಡ ತಾವು ವಿಚಾರ ಮಾಡಬೇಕು. ಲಾಲ್‌ಬಹದ್ದೂರ್ ಶಾಸ್ತ್ರಿಯವರ ಹೆಸರನ್ನು ಇಡಬಾರದು ಎಂದು ಅಲ್ಲ, ಈ ರೀತಿಯಾದ ಅಭಿಪ್ರಾಯ ಕೂಡ ಇದೆ, ಇದರ ಬಗ್ಗೆ ತಾವು ಸಮಾಲೋಚನೆಯನ್ನು ಮಾಡಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾಡಬೇಕು, ಆ ಪುತ್ಥಳಿಯ ಅನಾವರಣವನ್ನು ಆದಷ್ಟು ಬೇಗನೆ ಆಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಂತಹ ವಿಷಯದಲ್ಲಿ ಕಾಂಟ್ರವರ್ಸಿ ಬರಬಾರದು, ಬಾಳೇಕುಂದ್ರಿಯವರು ಒಬ್ಬ ತಜ್ಞ ಇಂಜಿನಿಯರ್ ಈಗಾಗಲೇ ಅವರ ಪುತ್ಥಳಿಯನ್ನು ಇಡಲಾಗಿದೆ. ಅವರ ಹೆಸರಿನಲ್ಲಿ ಒಂದು ಕಾಲುವೆಯೂ ಕೂಡ ಇದೆ. ಅದಕ್ಕೆ ಇದನ್ನು ಲಾಲ್‌ಬಹದ್ದೂರ್ ಶಾಸ್ತ್ರಿಯವರ ಜೊತೆಗೆ ಹೋಲಿಕೆ ಮಾಡಿಕೊಂಡು ಹೋದರೆ ಏನಾಗುತ್ತದೆ, ಇದರ ಬಗ್ಗೆ ಜನರಲ್ಲಿ ಒಂದು ತಪ್ಪು ಭಾವನೆ ಬರುತ್ತದೆ. ಯಾವುದೋ ಒಂದು ಹೆಸರನ್ನು ಇಡಬೇಕು, ಇನ್ನೊಬ್ಬರು ಇನ್ನೊಂದು ಹೆಸರನ್ನು ಹೇಳುತ್ತಾರೆ, ಎಂದು ಹೇಳುವುದು ಬೇಡ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಲಾಲ್‌ಬಹದ್ದೂರ್ ಶಾಸ್ತ್ರಿಯವರ ಹೆಸರು ಇಡುವುದರಿಂದ ತಪ್ಪೇನು ಇಲ್ಲ.

ಅದಕ್ಕೆ ಒಂದು ಬೆಲೆ ಬರುತ್ತದೆನ್ನುವಂತಹ ದೃಷ್ಟಿಯಿಂದ ಅದನ್ನು ಆದಷ್ಟು ಬೇಗನೆ ಮಾನ್ಯ ಮುಖ್ಯಮಂತ್ರಿಗಳು ಕೂಡ ಪ್ರೈಮಿನಿಸ್ಟರ್‌ರವರನ್ನು ಇನ್‌ವೈಟ್ ಮಾಡಿ ಈ ಕೆಲಸ ಮಾಡಬೇಕೆಂದು ಹೇಳಿ ಪ್ರಯತ್ನ ಮಾಡುತ್ತಿದ್ದಾರೆ. ಬಹುಶಃ ಅದಾದ ನಂತರ ಅಲ್ಲಿ ಡೇಟ್ ನಿಗದಿಯಾಗಿ ಬಂದರೆ ಖಂಡಿತವಾಗಿ ಈ ಎರಡು ಕಾರ್ಯಕ್ರಮಗಳು ನಡೆಯುತ್ತದೆ. ಅದರಲ್ಲಿ ತಾವು ಕೂಡ ಪಾಲ್ಗೊಳ್ಳುತ್ತೀರಿ, ಜನರು ಕೂಡ ಪಾಲ್ಗೊಳ್ಳುತ್ತಾರೆ. ಅದರ ಬಗ್ಗೆ ನನ್ನ ಮನವಿ ಏನೆಂದರೆ, ಇದರ ಬಗ್ಗೆ ಆದಷ್ಟು ಹೆಚ್ಚಿನ ಚರ್ಚೆಯನ್ನು ಮಾಡುವುದು ಬೇಡ, ಇದನ್ನು ಇಷ್ಟಕ್ಕೆ ಬಿಟ್ಟರೆ ಒಳ್ಳೆಯದು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಈಗ ಯಾರು ಅಡಿಗಲ್ಲನ್ನು ಇಟ್ಟರು ಅವರ ಹೆಸರ ಮೇಲೆಲ್ಲಾ ಇಡುವುದು ಸೂಕ್ತವೆನಿಸುವುದಿಲ್ಲ. ಲಾಲ್‌ಬಹದ್ದೂರ್‌ಶಾಸ್ತ್ರಿಯವರು ಮಹಾನ್‌ವ್ಯಕ್ತಿ ಅವರ ಬಗ್ಗೆ ನಮಗೆ ಯಾವುದು ಮತಭೇದವಿಲ್ಲ. ಅಲ್ಲಿ ಬಾಳೇಕುಂದ್ರಿಯವರ ಕಾಂಟ್ರಿಬ್ಯೂಷನ್ ಬಹಳ ಹೆಚ್ಚು ಇದೆ. ಅವರ ಹೆಸರನ್ನು ಇಡುವುದು ಸೂಕ್ತ ಎನಿಸುತ್ತದೆ. ಲಾಲ್‌ಬಹದ್ದೂರ್ ಶಾಸ್ತ್ರಿಯವರು ಮಹಾನ್ ವ್ಯಕ್ತಿ ಅವರ ಹೆಸರನ್ನು ಇಡಬಹುದು.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಉಪಾಧ್ಯಕ್ಷರೆ, ಕೊಶ್ಚನ್ ಹವರ್‌ನ್ನು ತೆಗೆದುಕೊಳ್ಳಿ